ನೀಡಿತು. ಆದರೆ ಆ ಪ್ರದೇಶದ ಒಂದು ಅಡಿಯೂ ನೆಟ್ಟಗಿರಲಿಲ್ಲ. ಹಳ್ಳಕೊಳ್ಳ, ಕುರುಚಲು ಗಿಡಗಳು, ಕಲ್ಲುಬಂಡೆಗಳು ಇದ್ದ ಈ ಜಾಗದಲ್ಲಿ ಏನನ್ನಾದರೂ ನಿರ್ಮಿಸುವುದು ಸಾಧ್ಯವೇ ಎಂದು ಯೋಚಿಸುವಂತಿತ್ತು. ಅಲ್ಲದೆ ಈ ನಿವೇಶನದ ಬದಿಗೆ ಒಂದು ರುದ್ರಭೂಮಿ ಬೇರೆ ಇತ್ತು. ಹೀಗೆ ಯಾರಿಗೂ ಬೇಡದಂತಿದ್ದ ಈ ಪ್ರದೇಶವು ಬೆಂಗಳೂರಿನ ಶ್ರೀಶಾರದಾ ಮಠದ ಸಂನ್ಯಾಸಿನಿಯರ ಪಾಲಿಗೆ ಬಂದಿತ್ತು. ಆದರೆ ಅವರು ಇದರಿಂದ ಧೃತಿಗೆಡಲಿಲ್ಲ. ಶ್ರೀಶಾರದಾದೇವಿಯವರ ಬಳುವಳಿಯಾದ ಅಪಾರ ಆಧ್ಯಾತ್ಮಿಕ ಶಕ್ತಿ, ಭಕ್ತವೃಂದದ ಸಂಪೂರ್ಣ ಬೆಂಬಲ ಹಾಗೂ ಈ ಬಂಜರು ಭೂಮಿಯನ್ನು ಒಂದು ಪವಿತ್ರ ತಾಣವನ್ನಾಗಿ ಪರಿವರ್ತಿಸಲೇಬೇಕೆಂಬ ಇಲ್ಲಿನ ಸಂನ್ಯಾಸಿನಿಯರ ದೃಢ ನಿರ್ಧಾರದಿಂದಾಗಿ ಈ ಭೂಮಿಯಲ್ಲಿ ಪರಿವರ್ತನೆಗಳು ಉಂಟಾದವು. ಕುರುಚಲು ಗಿಡಪೊದೆಗಳು ಕಾಣೆಯಾಗಿ ಸುಂದರವಾದ ಮತ್ತು ಕಂಪನ್ನು ಬೀರುವ ವರ್ಣರಂಜಿತ ಹೂವಿನ ಗಿಡಗಳು ಹಾಗೂ ಹಸಿರು ಮರಗಳು ಬೆಳೆದವು. ೧೯೭೭ ರ ಸೆಪ್ಟೆಂಬರ್ ೫ ರಂದು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಅಧ್ಯಕ್ಷರಾಗಿದ್ದ ಸ್ವಾಮಿ ವೀರೇಶ್ವರಾನಂದಜಿಯವರಿಂದ ಈ ಕೇಂದ್ರದ ಸ್ವಂತ ಕಟ್ಟಡದ ಶಂಕುಸ್ಥಾಪನೆಯಾಯಿತು. ೧೯೭೭ ರ ಅಕ್ಟೋಬರ್‌ನಲ್ಲಿ ಶಾರದಾ ಮಿಷನ್ ಕೇಂದ್ರವನ್ನು ಶ್ರೀಶಾರದಾ ಮಠವೆಂದು ಬದಲಾಯಿಸಲಾಯಿತು. ೧೯೮೧ ರ ಜುಲೈ ೩ ರಂದು ಕೇಂದ್ರವನ್ನು ಸ್ವಂತ ಕಟ್ಟಡಕ್ಕೆ ವರ್ಗಾಯಿಸಲಾಯಿತು. ೧೯೮೧ ರ ಆಗಸ್ಟ್ ೧೨ ರಂದು ಶ್ರೀಶಾರದಾ ಮಠ ಹಾಗೂ ರಾಮಕೃಷ್ಣ ಶಾರದಾ ಮಿಷನ್ನಿನ ಆಗಿನ ಅಧ್ಯಕ್ಷರಾಗಿದ್ದ ಪ್ರವ್ರಾಜಿಕಾ ಮೋಕ್ಷಪ್ರಾಣಾ ಮಾತಾಜಿಯವರಿಂದ ಇದರ ಉದ್ಘಾಟನೆಯಾಯಿತು.

ಹೀಗೆ ಎರಡೂವರೆ ದಶಕಗಳಲ್ಲಿ ಇಲ್ಲಿನ ಸಂನ್ಯಾಸಿನಿಯರು ಬಂಜರು ಭೂಮಿಯನ್ನು ಒಂದು ತಪೋಭೂಮಿಯನ್ನಾಗಿ ಪರಿವರ್ತಿಸಿರುವುದು ಸಂತೋಷದ ಸಂಗತಿ. ಶ್ರೀಶಾರದಾ ಮಠದ ಪ್ರಾರಂಭದಿಂದಲೂ ಇದರ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ **ಪ್ರವ್ರಾಜಿಕಾ ಶುಭ್ರಪ್ರಾಣಾ ಮಾತಾಜಿ** ಅವರ ಮಾರ್ಗದರ್ಶನದಲ್ಲಿ ಶ್ರೀಶಾರದಾ ಮಠವು ಬಗೆಬಗೆಯ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸೇವಾಕಾರ್ಯಗಳಲ್ಲಿ ನಿರತವಾಗಿದೆ. ★

## ಕರುಣಾಳು ಸಂತ ವ್ಯಾಲೆಂಟೈನ್

೧೮೦೦ ವರ್ಷಗಳ ಹಿಂದೆ ರೋಮ್ ಚಕ್ರವರ್ತಿ ತನ್ನ ರಾಜ್ಯದಲ್ಲಿ ವಾಸಿಸುವ ಯುವಕರೆಲ್ಲ ಸೈನ್ಯಕ್ಕೆ ಸೇರಿ ಸೇವೆ ಸಲ್ಲಿಸಬೇಕೆಂದು ಆಜ್ಞೆ ಹೊರಡಿಸಿದ. ಅಷ್ಟು ಸಾಲದೆಂಬಂತೆ ಯಾವ ಯುವಕನೂ ಮದುವೆ ಆಗಬಾರದೆಂದು ಆದೇಶ ಮಾಡಿದ. ಇದೇ ಸಮಯದಲ್ಲಿ ಕ್ರಿಶ್ಚಿಯನ್ ಧರ್ಮ ಎಲ್ಲ ಕಡೆಗೂ ಹರಡುತ್ತಿತ್ತು. ಆದರೆ ರೋಮ್ ದೊರೆ ಇದಕ್ಕೆ ವಿರುದ್ಧವಾಗಿದ್ದ. ಅವನಿಗೆ ಕ್ರಿಶ್ಚಿಯನ್ ಧರ್ಮ ತನ್ನ ದೇಶಕ್ಕೆ ಕಾಲಿಡುವುದು ಇಷ್ಟವಿರಲಿಲ್ಲ. ಆದರೂ ಕೆಲವರು ಗುಟ್ಟಾಗಿ ಕ್ರಿಸ್ತನ ಸಂದೇಶವನ್ನು ಪ್ರಚಾರ ಮಾಡುತ್ತಿದ್ದರು. ಹೀಗೆ ಮಾಡುತ್ತಿದ್ದವರಲ್ಲಿ ಸಂತ ವ್ಯಾಲೆಂಟೈನ್ ಕೂಡಾ ಒಬ್ಬ. ವ್ಯಾಲೆಂಟೈನ್ ಕಷ್ಟದಲ್ಲಿದ್ದ ಎಲ್ಲರಿಗೂ ತನ್ನ ಕೈಲಾದ ಸಹಾಯ ಮಾಡುತ್ತಿದ್ದ. ಈ ಸಂದರ್ಭದಲ್ಲಿ ಮದುವೆಯಾಗಲಾರದೆ ಹತಾಶರಾದ ಯುವಪ್ರೇಮಿಗಳು ವ್ಯಾಲೆಂಟೈನ್ ಬಳಿ ಹೋಗಿ ತಮ್ಮ ಕಷ್ಟ ತೋಡಿಕೊಂಡರು. ಹೇಗಾದರೂ ಮಾಡಿ ತಾವು ಇಷ್ಟಪಟ್ಟ ಹುಡುಗಿಯರ ಜೊತೆ ತಮಗೆ ಮದುವೆ ಮಾಡಿಸಬೇಕೆಂದು ಬೇಡಿಕೊಂಡರು. ವ್ಯಾಲೆಂಟೈನ್ ಇವರ ಕಷ್ಟ ನೋಡಿ ಮರುಗಿದ. ರಾಜಾಜ್ಞೆಗೆ ವಿರುದ್ಧವಾಗಿ ಕೆಲವು ಯುವಕ–ಯುವತಿಯರಿಗೆ ಮದುವೆ ಮಾಡಿಸಿದ. ಈ ವಿಷಯ ಹೇಗೋ ರಾಜನ ಕಿವಿಗೆ ಮುಟ್ಟಿ, ಅವನು ವ್ಯಾಲೆಂಟೈನ್‌ನನ್ನು ಜೈಲಿಗೆ ಕಳುಹಿಸಿದ. ಜೈಲಿಗೆ ಹೋದರೂ ವ್ಯಾಲೆಂಟೈನ್‌ನ ಪ್ರೀತಿ–ಕರುಣೆಗಳು ಕಡಮೆಯಾಗಲಿಲ್ಲ. ಅಲ್ಲಿಯೂ ಶಾಂತಮೂರ್ತಿಯಾಗಿಯೇ ಇದ್ದ.

ಜೈಲಿನ ಮುಖ್ಯಾಧಿಕಾರಿಗೆ ಬಹುದಿನದ ಕೊರಗಿತ್ತು. ಅವನ ೮–೧೦ ವರ್ಷದ ಪುಟ್ಟ ಬಾಲೆ ಕುರುಡಿಯಾಗಿದ್ದಳು. ಎರಡು ವರ್ಷದ ಹುಡುಗಿಯಾಗಿದ್ದಾಗ ಎರಡೂ ಕಣ್ಣುಗಳನ್ನೂ ಕಳೆದುಕೊಂಡಿದ್ದಳು. ವ್ಯಾಲೆಂಟೈನ್ ಜೈಲಿನಲ್ಲಿ ಸುಂದರವಾದ ಹೂವಿನ ತೋಟ ಬೆಳೆಸಿದ್ದ. ಅಲ್ಲಿದ್ದ ಬಣ್ಣ ಬಣ್ಣದ ಸುಂದರವಾದ ಹೂವುಗಳನ್ನು ತನ್ನ ಮಗಳು ನೋಡಲಾರಳು ಎಂದು ಆ ಅಧಿಕಾರಿ ಸದಾ ಕೊರಗುತ್ತಿದ್ದ. ಆಗ ವ್ಯಾಲೆಂಟೈನ್, "ನಿನ್ನ ಮಗಳನ್ನು ಕರೆದು ತಾ. ಅವಳಿಗೆ ಕ್ರಿಸ್ತನ ಕರುಣೆಯಿಂದ ಪುನಃ ಕಣ್ಣು ಬರಬಹುದು." ಎಂದು ಹೇಳಿದ. ಮೊದಮೊದಲು ಈ ಅಧಿಕಾರಿಗೆ ನಂಬಿಕೆ ಬರಲಿಲ್ಲ. ಅನಂತರ ಆದದ್ದಾಗಲಿ ಎಂದು ಭಾವಿಸಿ ತನ್ನ ಪುಟ್ಟ ಮಗಳನ್ನು ಕೈ ಹಿಡಿದು ಕರೆತಂದ. ವ್ಯಾಲೆಂಟೈನ್‌ಗೆ ಅವಳ ಮೇಲೆ ಅಪಾರ ಕರುಣೆ ಹುಟ್ಟಿತು. ಅವನು ಕ್ರಿಸ್ತನಲ್ಲಿ ಪ್ರಾರ್ಥಿಸಿ ಆಕೆಯ ಕಣ್ಣುಗಳ ಮೇಲೆ ಕೈಯಾಡಿಸಿದ. ಪವಾಡವೋ ಏನೊ ಎಂಬಂತೆ ಹುಡುಗಿಯ ರೆಪ್ಪೆಗಳು ಅದುರಿದವು; ಬೆಳಕಿನ ಪ್ರವಾಹವೇ ಆಕೆಯ ಕಣ್ಣೊಳಗೆ ನುಗ್ಗಿದಂತಾಯಿತು; ರೆಪ್ಪೆಗಳು ಅಗಲವಾಗಿ ತೆರೆದುಕೊಂಡವು; ಆಕೆಗೆ ಬಣ್ಣ ಬಣ್ಣದ ಹೂವುಗಳು ಕಾಣಲಾರಂಭಿಸಿದವು; ಸಂತೋಷದಿಂದ ಅವಳು ಕುಣಿದಾಡಿದಳು.

ಈ ಸುದ್ದಿ ಎಲ್ಲ ಕಡೆ ಹಬ್ಬಿತು. ಕುರುಡಿಗೆ ದೃಷ್ಟಿ ಬರುವಂತೆ ಮಾಡಿದ ವ್ಯಾಲೆಂಟೈನ್ ಒಬ್ಬ ಪವಾಡಪುರುಷ–ಸಂತನಾಗಿಬಿಟ್ಟ. ಆದರೇನು, ಈ ಸುದ್ದಿ ರಾಜನಿಗೆ ಕೋಪವುಂಟುಮಾಡಿತು. ಅವನು ವ್ಯಾಲೆಂಟೈನ್‌ನ ತಲೆ ಕಡಿಯಲು ಆಜ್ಞೆ ಮಾಡಿದ. ವ್ಯಾಲೆಂಟೈನ್‌ನನ್ನು ಸರಪಳಿಯಿಂದ ಬಂಧಿಸಿ ಮತ್ತೊಂದು ಜೈಲಿಗೆ ದೂಡಲಾಯಿತು. ಫೆಬ್ರವರಿ ೧೪ ರಂದು ಅವನ ತಲೆ ಕಡಿಯಬೇಕೆಂದು ನಿರ್ಧಾರವಾಯಿತು. ದೃಷ್ಟಿ ಮರುಕಳಿಸಿದ ಆ ಪುಟ್ಟ ಹುಡುಗಿಗೆ ಈ ಸುದ್ದಿ ಬರಸಿಡಿಲಿನಂತೆ ಅಪ್ಪಳಿಸಿತು. "ಅಯ್ಯೋ ದೇವರೇ! ವ್ಯಾಲೆಂಟೈನ್ ಸಾಯುವುದಕ್ಕಿಂತ ನಾನು ಕುರುಡಿಯಾಗಿದ್ದರೆ ಒಳ್ಳೆಯದಾಗಿತ್ತು; ನನಗೆ ಈ ಕಣ್ಣು ಬೇಡ" ಎಂದು ಅಳತೊಡಗಿದಳು. ಹುಡುಗಿಯ ಅಪ್ಪನಿಗೂ ದುಃಖವಾಯಿತು. "ಇಂತಹ ಮಹಾತ್ಮನನ್ನು ನಾನೆಂದೂ ನೋಡಿಲ್ಲ. ಆದರೆ ನಾನೇನೂ ಮಾಡಲು ಸಾಧ್ಯವಿಲ್ಲ" ಎಂದು ಮಗಳನ್ನು ಸಮಾಧಾನಪಡಿಸಲು ಪ್ರಯತ್ನಿಸಿದ. ನಂತರ ತನ್ನ ಮಗಳ ಗೋಳನ್ನು ವ್ಯಾಲೆಂಟೈನ್‌ಗೆ ತಿಳಿಸಿದ. ಆಗ ವ್ಯಾಲೆಂಟೈನ್ ಆ ಪುಟ್ಟ ಹುಡುಗಿಗೆ ಒಂದು ಚಿಕ್ಕ ಕಾಗದ ಬರೆದ. "ನನ್ನ ಮರಣದಂಡನೆಗೆ ನೀನು ಕಾರಣಳಲ್ಲ, ದುಃಖಿಸಬೇಡ" ಎಂದು ತಿಳಿಸಿದ. 'ನಿನ್ನ ಪ್ರೀತಿಯ ವ್ಯಾಲೆಂಟೈನ್' ಎಂದು ಸಹಿ ಮಾಡಿದ. ಹೀಗೆ ವ್ಯಾಲೆಂಟೈನ್ ಫೆಬ್ರವರಿ ೧೪ ರಂದು ಇಹಲೋಕ ತ್ಯಜಿಸಿದ. ಅನಂತರ ಜನ ಅವನನ್ನು ನೆನೆಯಲಾರಂಭಿಸಿದರು. ಪ್ರೇಮಿಗಳಿಗೆ ವಿವಾಹ ಮಾಡಿಸಿದನೆಂಬ ಕಾರಣದಿಂದ, ಅವನನ್ನು ಮರಣದಂಡನೆಗೆ ಗುರಿ ಮಾಡಿದ ದಿನವಾದ ಫೆಬ್ರವರಿ ಹದಿನಾಲ್ಕನ್ನು, ಪ್ರೇಮಿಗಳ ದಿನವನ್ನಾಗಿ ಆಚರಿಸುವುದು ರೂಢಿಗೆ ಬಂತು. ಇದು ಆ ಮಹಾತ್ಮನು **'ಹುತಾತ್ಮನಾದ ದಿನ'** ಎಂಬುದನ್ನು ಮರೆತ ಜನ, ಈ ದಿನದಂದು ಮನಸ್ಸಿಗೆ ಬಂದಂತೆ ನಡೆದುಕೊಳ್ಳುತ್ತಾರೆ. ಇದು ವಿಪರ್ಯಾಸವಲ್ಲವೆ?

– ಜಿ.ಎಸ್. ಜಯದೇವ್, ಚಾಮರಾಜನಗರ